ದಿನಾಂಕ: 21.11.2020 ರಂದು ಸಮಯ ಬೆಳಿಗ್ಗೆ 03.30 ಗಂಟೆಗೆ ವಾರ್ಡ್.ಸಂಖ್ಯೆ.68 ಮಹಾಲಕ್ಷ್ಮೀಪುರಂ ವಾರ್ಡ್ ಕಛೇರಿಯಲ್ಲಿ ವಾರ್ಡ್ ಕಮಿಟಿ ಸಭೆಯನ್ನು ಮಾನ್ಯ ನೋಡಲ್ ಅಧಿಕಾರಿ (ಅಧ್ಯಕ್ಷರು) ರವರು ಮತ್ತು ವಾರ್ಡ್ ಅಭಿಯಂತರರು (ಕಾರ್ಯದರ್ಶಿಗಳು) ಅಧ್ಯಕ್ಷತೆಯಲ್ಲಿ ಕರೆಯಲಾಯಿತು.

ಹಾಜರಿದ್ದ ಅಧಿಕಾರಿಗಳು

1. ಶ್ರೀ ರಾಜಶೇಖರ್ ಎಸ್.ಜಿ, ನೋಡಲ್ ಆಫೀಸರ್ (ಅಧ್ಯಕ್ಷರು)
2. ಶ್ರೀ.ಧನಂಜಯ ಜಿ.ಟಿ ಸಹಾಯಕ ಅಭಿಯಂತರರು, ವಾರ್ಡ್.ಸಂಖ್ಯೆ.68, ಮಹಾಲಕ್ಷ್ಮೀಪುರಂ (ಕಾರ್ಯದರ್ಶಿ)
3. ಶ್ರೀ ನರಸಿಂಹ ಮೂರ್ತಿ ಡಿ.ಕೆ, ಸಹಾಯಕ ಕಂದಾಯ ಅಧಿಕಾರಿ, ವಾರ್ಡ್.ಸಂಖ್ಯೆ.68, ಮಹಾಲಕ್ಷ್ಮೀಪುರಂ.
4. ಶ್ರೀ ಲೋಹಿತ್, ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್.ಸಂಖ್ಯೆ.68, ಮಹಾಲಕ್ಷ್ಮೀಪುರಂ.
5. ಶ್ರೀಮತಿ ಗೀತಾ ಕೆ, ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್.ಸಂಖ್ಯೆ.68, ಮಹಾಲಕ್ಷ್ಮೀಪುರಂ.
6. ಶ್ರೀ ಕೆ ಗಂಗಚೆಲುವಯ್ಯ, ಜ.ಪ.ವಿ (ಬಿ.ಡಬ್ಲ್ಯೂ.ಎಸ್.ಎಸ್.ಬಿ) ವಾರ್ಡ್. ಸಂಖ್ಯೆ. 68, ಮಹಾಲಕ್ಷ್ಮೀಪುರಂ.
7. ಶ್ರೀ ಲೋಕೇಶ್, ಪಶು ಸಂಗೋಪನ ಪರಿವೀಕ್ಷಕರು, ವಾರ್ಡ್.ಸಂಖ್ಯೆ.68, ಮಹಾಲಕ್ಷ್ಮೀಪುರಂ.
8. ಶ್ರೀ ಕೆಂಪಯ್ಯ, ಬೀದಿ ದೀಪ ಗುತ್ತಿಗೆದಾರರು, ವಾರ್ಡ್.ಸಂಖ್ಯೆ.68, ಮಹಾಲಕ್ಷ್ಮೀಪುರಂ.
9. ಶ್ರೀಮತಿ ಶ್ವೇತ ಮಧು, ಕಂದಾಯ ಪರಿವೀಕ್ಷಕರು, ವಾರ್ಡ್.ಸಂಖ್ಯೆ.68, ಮಹಾಲಕ್ಷ್ಮೀಪುರಂ.
10. ಶ್ರೀಮತಿ ಸ್ಮಿತಾ, ಕಂದಾಯ ವಸೂಲಿಗಾರರು, ವಾರ್ಡ್.ಸಂಖ್ಯೆ.68, ಮಹಾಲಕ್ಷ್ಮೀಪುರಂ.

ಶ್ರೀ ಧನಂಜಯ ಜಿ.ಟಿ ಕಾರ್ಯದರ್ಶಿಗಳು ಮಾನ್ಯ ಅಧ್ಯಕ್ಷರು ಹಾಗೂ ಸಭೆಯಲ್ಲಿ ಹಾಜರಿದ್ದ ಇತರೆ ಅಧಿಕಾರಿಗಳನ್ನು ಹಾಗೂ ಸಾರ್ವಜನಿಕರನ್ನು ಸಭೆಗೆ ಸ್ವಾಗತಿಸಲಾಯಿತು.

1. ಮಾನ್ಯ ಅಧ್ಯಕ್ಷರು ಹಿಂದಿನ ಸಭೆಯ ನಡವಳಿಗಳನ್ನು ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳಿಗೆ ಓದಿ ತಿಳಿಸಿದರು.
2. ಮಾನ್ಯ ಕಾರ್ಯದರ್ಶಿಗಳು ಬೀದಿ ದೀಪ ಗುತ್ತಿಗೆದಾರರಿಗೆ ವಾರ್ಡ್ ಸಂಖ್ಯೆ.68 ಮಹಾಲಕ್ಷ್ಮೀಪುರ ರಲ್ಲಿ ಎಷ್ಟು ಬೀದಿ ದೀಪದ ಕಂಬಗಳಿವೆ ಎಂಬ ಮಾಹಿತಿ ಕೋರಿದರು. ಸದರಿ ಗುತ್ತಿಗೆದಾರರು ಮಾಹಿತಿಯನ್ನು ನೀಡಿದರು.
3. ಮಾನ್ಯ ಕಾರ್ಯದಶಿಗಳು ಕಂದಾಯ ಪರಿವೀಕ್ಷಕರಿಗೆ ಮತದಾನ ಕೇಂದ್ರವನ್ನು ಸ್ಥಳಾಂತರಿಸುವ ಮತ್ತು ಹೊಸದಾಗಿ ಸ್ಥಳವನ್ನು ಗುರುತಿಸುವ ಬಗ್ಗೆ ಕೇಳಿದರು ಇದಕ್ಕೆ ಕಂದಾಯ ಪರಿವೀಕ್ಷಕರು 2 ಮತದಾನ ಕೇಂದ್ರವನ್ನು ಗುರುತಿಸಲಾಗಿದೆ, ಇನ್ನು ಉಳಿಕೆ 3 ಮತದಾನ ಕೇಂದ್ರಗಳಿಗೆ ಸ್ಥಳವನ್ನು ಗುರುತಿಸಲು ಸ್ಥಳದ ತೊಂದರೆ ಇದೆ ಎಂದು ತಿಳಿಸಿದರು.
4. ಮಾನ್ಯ ಅಧ್ಯಕ್ಷರು ವಿವಿಧ ಕಾಮಗಾರಿಗಳ ಅಭಿವೃದ್ಧಿ ಕಾರ್ಯಗಳ ಬಗ್ಗೆ ಕೇಳಿದರು ಇದಕ್ಕೆ ಸಂಬಂದಪಟ್ಟ ವಾರ್ಡ್ ಅಭಿಯಂತರರು ಅಭಿವೃದ್ಧಿ ಕಾಮಗಾರಿಗಳ ಕಡತಗಳ ಬಗ್ಗೆ ಸಭೆಗೆ ವಿವರಿಸಿದರು.

Scanned with CamScanner

5. ಮಾನ್ಯ ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳು ಹಿರಿಯ ಆರೋಗ್ಯ ಪರಿವೀಕ್ಷಕರು ಕೋವಿಡ್–19 ಗೆ ಸಂಬಂಧಿಸಿದ ಮಾಹಿತಿಯನ್ನು ನೀಡುವಂತೆ ತಿಳಿಸಿದರು. ಹಿರಿಯ ಆರೋಗ್ಯ ಪರಿವೀಕ್ಷಕರು ಮಾಹಿತಿಯನ್ನು ಸಭೆಯಲ್ಲಿ ಓದಿ ತಿಳಿಸಿದರು.
6. ಮಾನ್ಯ ಆಯುಕ್ತರು ಬಿಬಿಎಂಪಿ ರವರು ಆಡಳಿತಾಧಿಕಾರಿಯವರ ಅವಧಿ ಬಂದನಂತರ ಹೊಸದಾಗಿ ಯಾವುದೇ ಕಾಮಗಾರಿಗಳಿಗೆ ಅನುಮೋದನೆ ನೀಡಬಾರದೆಂದು ಆದೇಶ ನೀಡಿರುತ್ತಾರೆ. ಆದ್ದರಿಂದ 2020–21ನೇ ಅಯವ್ಯಯದಲ್ಲಿ ತುರ್ತು ಕಾಮಗಾರಿಗಳಿಗಾಗಿ ಕಾಯ್ದಿರಿಸಿರುವ ರೂ.31.00 ಲಕ್ಷಗಳ ಅನುದಾನವನ್ನು ತುರ್ತಾಗಿ ಅನುಮೋದನೆ ನೀಡಬೇಕೆಂದು ಸಭೆಯಲ್ಲಿ ಎಲ್ಲಾ ಸದಸ್ಯರು ತೀರ್ಮಾನಿಸಲಾಯಿತು.
7. ಶ್ರೀ ನರಸಿಂಹಮೂರ್ತಿ ಡಿ.ಕೆ ಸಹಾಯಕ ಕಂದಾಯ ಅಧಿಕಾರಿ ರವರು ಅಂತಿಮವಾಗಿ ಸಭೆಗೆ ಹಾಜರಿದ್ದ ಅಧಿಕಾರಿಗಳಿಗೆ ವಂದನೆಗಳು ಹೇಳುತ್ತಾ ಸಭೆಯನ್ನು ಮುಕ್ತಾಯಗೊಳಿಸಿದರು.

**ಅಧ್ಯಕ್ಷರು**

21/11/2020

ವಾರ್ಡ್ ಕಮಿಟಿ, ವಾರ್ಡ್.ಸಂಖ್ಯೆ.68

ಮಹಾಲಕ್ಷ್ಮೀಪುರಂ

Scanned with CamScanner